https://www.kuvempuonline.com

**Q.P. Code – 10237-B**

**ದ್ವಿತೀಯ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ, ನವೆಂಬರ್/ಡಿಸೆಂಬರ್ 2016**

*(ಹಳಬರಿಗೆ)*

**ಐಚ್ಛಿಕ ಕನ್ನಡ ಪತ್ರಿಕೆ – ೨**

**(SAB 430) ಸಾಹಿತ್ಯ ಸಂಕಥನ – ೨**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

1. (ಅ) **ಒಂದು** ಪದ್ಯದ ಸಾಂಸ್ಕೃತಿಕ ವಿಶ್ಲೇಷಣೆ ಮಾಡಿ : **1 × 6 = 6**

(೧) ನೆತ್ತಮಮಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದುಕಾ.
ಡುತ್ತಿರೆ ಲಂಬಣಂ ಪರಿಯೆ ಮುತ್ತಿನ ಕೇಡನೆ ನೋಡಿ ನೋಡಿ ಬ
ಳ್ಕುತ್ತಿರೆಯೇವಮಿಲ್ಲದಿವನಾಯ್ತುವೊ ತಪ್ಪದೆ ಪೇಳಿಮೆಂಬ ಭೂ
ಪೋತ್ತಮನಂ ಬಿಸುಟ್ಟೆರದೆ ನಿಮ್ಮೊಳೆ ಪೊಕ್ಕೊಡೆ ಬೇಡನಲ್ಲವೇ.

(೨) ನೊಂದು ಸೈರಿಸದವ ಕನಿಷ್ಠನು
ನೊಂದು ಸೈರಿಸುವವನು ಮಧ್ಯಮ
ನೊಂದೆನೆಂಬುದು ನೆನೆಹಿಗಿಲ್ಲದೊಡಾತನುತ್ತಮನು
ಎಂದು ಬಗೆಯುತೆ ತನ್ನ ಮನದಲಿ
ನೊಂದೆನಾದೊಡೆ ಮೂಜಗಂಗಳು
ಬೆಂದು ಹೋಹುವೆನುತ್ತೆ ನಸುನಗುತಿರ್ದನಲ್ಲಿಮನು.

(ಆ) **ಮೂರಕ್ಕೆ** ಟಿಪ್ಪಣಿ ಬರೆಯಿರಿ : **3 × 3 = 9**

(೧) ಹಂಪಿ ಶಾಸನ

(೨) ದುರ್ಯೋಧನ

(೩) ಅಕ್ಕಮಹಾದೇವಿ

(೪) ಶಾಸನ ಸಾಹಿತ್ಯ

(೫) ವಡ್ಡಾರಾಧನೆ

2. ಕೆಳಗಿನವುಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಿ : **5 × 10 = 50**

(೧) ಮಹಾಶ್ವೇತೆ ಪುಂಡರೀಕನೆಂಬ ಋಷಿ ಕುಮಾರನಿಗೆ ಮನ ಸೋಲುವ ಸಂದರ್ಭವನ್ನು ಪಠ್ಯದ ಹಿನ್ನಲೆಯಲ್ಲಿ ವಿವರಿಸಿ.

(೨) ಅಲ್ಲಮ ಪ್ರಭುವಿನ ವಚನಗಳ ಆಶಯವನ್ನು ವಚನ ಸಾಹಿತ್ಯದ ಹಿನ್ನಲೆಯಲ್ಲಿ ವಿವರಿಸಿ.

(೩) ರಗಳೆ ಸಾಹಿತ್ಯಕ್ಕೆ ಹರಿಹರನ ಕೊಡುಗೆಗಳೇನು? ಪುಷ್ಪರಗಳೆಯಲ್ಲಿ ಭಕ್ತನೊಬ್ಬನ ಭಕ್ತಿ, ಪರವಶತೆ, ಸಂಭ್ರಮಗಳು ಚಿತ್ರಿತಗೊಂಡಿರುವ ಬಗೆಯನ್ನು ವಿವರಿಸಿರಿ.



https://www.kuvempuonline.com

https://www.kuvempuonline.com

https://www.kuvempuonline.com

https://www.kuvempuonline.com



(೪) ಕೀರ್ತನ ಸಾಹಿತ್ಯದ ಬೆಳವಣಿಗೆಯನ್ನು ಗುರುತಿಸಿ, ಕನಕದಾಸರ ಕೀರ್ತನೆಗಳಲ್ಲಿ ವ್ಯಕ್ತವಾಗಿರುವ ಸಾಮಾಜಿಕ ವಿಡಂಭನೆಯನ್ನು ವಿವರಿಸಿ.

(೫) ಮಗನನ್ನು ಕಳೆದುಕೊಂಡ ರೋಧನವನ್ನು ರಾಘವಾಂಕ ಹೇಗೆ ಚಿತ್ರಿಸಿದ್ದಾನೆ ವಿವರಿಸಿ.

(೬) ಕರುಣಾಳು ರಾಘವನಲ್ಲಿ ತಪ್ಪಿಲ್ಲ. ಈ ಪದ್ಯ ಭಾಗದಲ್ಲಿ ರಾಮನ ವರ್ತನೆಯ ಬಗೆಗೆ ಸೀತೆ ಕೇಳುವ ಪ್ರಶ್ನೆಗಳು ಹೆಣ್ಣಿನ ಅಸ್ತಿತ್ವದ ಪ್ರಶ್ನೆಗಳಾಗಿವೆ ಚರ್ಚಿಸಿರಿ.

(೭) ಅಲ್ಲಮ ಮತ್ತು ಸಿದ್ಧರಾಮರ ನಡುವೆ ನಡೆದ ಭಕ್ತಿಯ ಸಂಘರ್ಷವನ್ನು ಚಿತ್ರಿಸಿ.

3. ಮೂರನ್ನು ಕುರಿತು ಬರೆಯಿರಿ : 3 × 5 = 15

(೧) ನಾಗಚಂದ್ರ

(೨) ನಂಜುಂಡ ಕವಿ

(೩) ಸಿಂಗರಾರ್ಯ

(೪) ಪುರಂದರ ದಾಸ

(೫) ನಯನಸೇನ

---

https://www.kuvempuonline.com
Whatsapp @ 9300930012
Send your old paper & get 10/-
अपने पुराने पेपर्स भेजे और 10 रुपये पायें,
Paytm or Google Pay से



https://www.kuvempuonline.com
https://www.kuvempuonline.com
https://www.kuvempuonline.com